ಶ್ರೀ ಎಂ.ಸಿ .ನಾಣಯ್ಯ : ಕಾನೂನಿನಡಿ ಒಂದು ಸಲ ರದ್ದುಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಳ್ಳಬೇಕಾದರೆ ಅದಕ್ಕೆ ಬೇಕಾಗುವಷ್ಟು ಕಾರ್ಯಕ್ರಮಗಳನ್ನು ಹಾಕಬೇಕು. ಜಿಲ್ಲಾಧಿಕಾರಿಗಳು ಕಳುಹಿಸಿರುವ ವರದಿಯನ್ನು ನಾವು ಪರಿಶೀಲಿಸಿ ಮುಂದಿನ ಕ್ರಮವನ್ನು ಕಾನೂನಿನಡಿಯಲ್ಲಿ ಕೈಗೊಳ್ಳುತ್ತೇವೆ.

ಒ) ಕಿತ್ತೂರು ಉತ್ಸವದ ಬಗ್ಗೆ

ಶ್ರೀ ಡಿ.ಬಿ. ಇನಾಂದಾರ್ (ಕಿತ್ತೂರು): ಅಧ್ಯಕ್ಷರೇ, ಕಿತ್ತೂರು ಉತ್ಸವವನ್ನು ಬೆಳಗಾಂನಲ್ಲಿ ಮಾಡುವುದಕ್ಕೆ ಹೊರಟಿದ್ದಾರೆ, ಯಾವ ರೀತಿ ಹಂಪಿ ಉತ್ಸವ ಹಂಪಿಯಲ್ಲಿ , ಕರಾವಳಿ ಉತ್ಸವ ಕಾರವಾರದಲ್ಲಿ ಮಾಡುತ್ತಾರೆ ಅದೇ ರೀತಿ ಕಿತ್ತೂರು ಉತ್ಸವ ಕಿತ್ತೂರಿನಲ್ಲಿ ಮಾಡಬೇಕು, ಬೆಳಗಾಂನಲ್ಲಿ ಮಾಡುವುದರಿಂದ ಅಲ್ಲಿ ಜನರ ಸೆಂಟಿಮೆಂಟ್‌ನ ಹರ್ಟ್ ಮಾಡುತ್ತಿದ್ದಾರೆ. ಜನರು ಸಂಪು ಹೂಡುವ ಸಾಧ್ಯತೆ ಇದೆ. ಆದ್ದರಿಂದ ಕಿತ್ತೂರು ಉತ್ಸವವನ್ನು ಕಿತ್ತೂರಿನಲ್ಲಿ ಮಾಡಿ ಮತ್ತೆಲ್ಲೂ ಮಾಡಬೇಡಿ ಎಂದು ಸಚಿವರನ್ನು ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು):- ಬೆಳಗಾವಿಯಲ್ಲಿ ಕಿತ್ತೂರು ಉತ್ಸವ ಮಾಡಬೇಕೆಂದು ನಾನು ಇಲಾಖೆ ವಹಿಸಿಕೊಂಡ ಮೇಲೆ ಅಕ್ಟೋಬರ್ 23 ರಂದು ಕಿತ್ತೂರಿನಲ್ಲೇ ಕಿತ್ತೂರು ಉತ್ಸವ ಪ್ರತಿವರ್ಷ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಾದಮೇಲೆ ನಮ್ಮ ಇಲಾಖೆಯಿಂದ ಪ್ರತಿಜಿಲ್ಲೆಯಲ್ಲೂ ಜಿಲ್ಲಾ ಉತ್ಸವ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಬೆಳಗಾಂ ಜಿಲ್ಲಾ ಉತ್ಸವವನ್ನು ಮುಂದಿನ ತಿಂಗಳೂ 18, 19 ಕ್ಕೆ ಬೆಳಗಾಂನಲ್ಲಿ ಮಾಡುತ್ತೇವೆ. ಕಿತ್ತೂರು ಉತ್ಸವವೇ ಬೇರೆ ಜಿಲ್ಲಾ ಉತ್ಸವವೇ ಬೇರೆ.

ಶ್ರೀ ಡಿ.ಬಿ. ಇನಾಂದಾರ: ಬೆಳಗಾಂ ಉತ್ಸವವನ್ನು ಕಿತ್ತೂರು ಉತ್ಸವ ಎಂದು ಕರೆಯಬೇಡಿ ಎಂದು ಜಿಲ್ಲಾ ಅಧಿಕಾರಿಗಳಿಗೆ ಸೂಚನೆ ಕೊಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸಂದೇಶ ಕಳುಹಿಸಿದ್ದೇನೆ. ಅದರ ಬಗ್ಗೆ ಯಾವ ಸಂಶಯವೂ ಪಡಬೇಕಾಗಿಲ್ಲ.

ಓ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಅಧ್ಯಕ್ಷರೇ, ಪ್ರಕೃತ ಕೆ ಎಸ್ ಆರ್ ಟಿಸಿ ಯಲ್ಲಿ 95ನೇ ಇಸವಿಯಿಂದ ನೂರಾರು ಯುವಕರನ್ನು ಶಿಕ್ಷಕರನ್ನಾಗಿ ನೇಮಕ ಮಾಡಿದ್ದು ಅವರ ಅವಧಿ ಮಾರ್ಚ್ 31ಕ್ಕೆ ಅಂತ್ಯಗೊಳ್ಳುತ್ತದೆ. ಇವರು ನಿರುದ್ಯೋಗಿಗಳಾಗುವ ಸಂಭವ ಇದೆ. ಪ್ರಕೃತ ಕೆ ಎಸ್ ಆರ್ ಟಿಸಿ ಯಲ್ಲಿ ಹಲವಾರು ಹುದ್ದೆಗಳು ಖಾಲಿ ಇದ್ದು ಈಗಾಗಲೇ ನೇಮಕಾತಿ ಅವುಗಳಿಗೆ ನಡೆದಿದೆ. ಈ ಸಂದರ್ಭದಲ್ಲಿ ತರಬೇತಿ ಪಡೆದಂಥ ಇವರಿಗೆ ಮೊದಲ ಆದ್ಯತೆ ನೀಡಬೇಕೆಂತಲೂ ಮತ್ತೆ ತರಬೇತಿ ಆದವರಿಗೆ ಯಾವುದೇ ವಿದ್ಯಾರ್ಹತೆ ಗಣನೆಗೆ ತೆಗೆದುಕೊಳ್ಳದೆ ಅವರ ಸೇವೆಯನ್ನು ಗಣನೆಗೆ ತೆಗೆದುಕೊಂಡ ಅವರನ್ನು ಖಾಯಂಗೊಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):- ಅಧ್ಯಕ್ಷರೇ, ಸದಾನಂದಗೌಡರು ಹೇಳಿದ ವಿಚಾರ ಸಾರಿಗೆ ಸಂಸ್ಥೆ ಅಧಿಕಾರಿಗಳ ಜೊತೆ ನಾನು ಮಾತನಾಡಿದ್ದೇನೆ. ಈ ಶಿಕ್ಷಕರು ನನ್ನನ್ನು ಭೇಟಿ ಮಾಡಿದ್ದರು

ನಾನು ಅವರಿಗೆ ಹೇಳಿದ್ದೇನೆ. ಈಗಿನ ಕೆ ಎಸ್ ಆ ರ್ ಟಿ ಸಿ ಕಾನೂನು ವ್ಯಾಪ್ತಿಯಲ್ಲಿ ನೇಮಕಾತಿ ಮಾಡುವಾಗ ಇವರಿಗೆ ಆದ್ಯತೆ ಕೊಡಲು ಅವಕಾಶ ಇಲ್ಲ. ಅದಿರಬೇಕಾಗಿತ್ತು. ಮುಂದೆ ನೇಮಕಾತಿ ಮಾಡುವಾಗ ಕಾನೂನು ಬದಲಾವಣೆ ಮಾಡುವುದಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಕಾನೂನು ಬದಲಾವಣೆ ತರುತ್ತೇವೆ. ಇವರಿಗೇ ಪ್ರಿಫರೆನ್ಸ್ ಕೊಡಬೇಕೆಂಬುದು ನಮ್ಮ ಅಭಿಪ್ರಾಯ. ಎರಡನೆಯದಾಗಿ ಈಗಿನವರನ್ನು ತೆಗದು ಹಾಕಬೇಕು ಅನ್ನುವ ಆಸೆ ನನಗಿಲ್ಲ. ಇವರದು ಕೇಂದ್ರ ಸರ್ಕಾರ ಕೊಡುವ ಸ್ಪೈಪೆಂಡರಿ ಸ್ಕೀಂ, ನಮ್ಮ ಸರ್ಕಾರದ ಎಂಪ್ಲಾಯ್ಮೆಂಟ್ ಅಂಡ್ ಟ್ರೈನಿಂಗ್ ಇಲಾಖೆ ಸ್ಪೈಪೆಂಡ್ ಕೊಡುವ ಮೂಲಕ ಇವರನ್ನು ನಡೆಸುತ್ತಿದ್ದೇವೆ ಈ ಮೂಲಕ ಕೆಲಸ ಕಲಿತುಕೊಳ್ಳುವುದಕ್ಕೆ ಒಂದು ಬಗೆಯ ತರಬೇತಿ ಕೊಟ್ಟಿದ್ದೇವೆಯೇ ಹೊರತು ಕೆಲಸ ಕೊಡುತ್ತೇವೆ ಎಂಬುದು ಎಲ್ಲೂ ಭರವಸೆ ಕೊಟ್ಟಿಲ್ಲ. ಆದರೂ ತಾವು ಇವತ್ತು ಹೇಳುವ ವಿಚಾರ ಸರಿಯಿದೆ. ಪ್ರಾಮಾಣಿಕವಾಗಿ ಇವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಡುಪಿಯ ಆರಾಧನಾ ಸಮಿತಿ ಬಗ್ಗೆ

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಅಧ್ಯಕ್ಷರೇ, ಎಲ್ಲೆಲ್ಲಿ ಕಾನೂನುಬಾಹಿರ ನೇಮಕಾತಿ ಮಾಡಬೇಕೋ ಅದನ್ನೆಲ್ಲಾ ನಮ್ಮ ಮುಜರಾಯಿ ಸಚಿವರು ಮಾಡುತ್ತಾರೆ. ಆದರೆ ಕಾನೂನಿನ ಪ್ರಕಾರ ನನ್ನ ಕ್ಷೇತ್ರದ ಆರಾಧನಾ ಸಮಿತಿಗೆ ಕಳೆದ ಮೂರು ವರ್ಷಗಳಿಂದ ಕೇಳುತ್ತಿದ್ದೇನೆ ಇವತ್ತಿನವರೆಗೂ ಆಗಲಿಲ್ಲ. ನಮ್ಮ ಕ್ಷೇತ್ರದ ದೇಗುಲಗಳು ಭಜನಾಮಂದಿರಗಳಿಗೆ ಸಮಾಜ ಮಂದಿರಗಳು ಸರ್ಕಾರದ ಅನುದಾನ ವಿತರಣೆ ಮಾಡುವಲ್ಲಿ ನಮ್ಮ ಜನ ಅವಕಾಶವಂಚಿತರಾಗಿದ್ದಾರೆ. ಜಿಲ್ಲಾ ಪ್ರಗತಿಪರಿಶೀಲನಾಸಭೆಯಲ್ಲಿ ಕೇಳಿಕೊಂಡೆ. ಆಮೇಲೆ ಮುಖ್ಯಮಂತ್ರಿಗಳು ಮಂಗಳೂರಿಗೆ 7 ತಿಂಗಳ ಹಿಂದೆ ಬಂದಿದ್ದಾಗ ಕೇಳಿಕೊಂಡೆ. ಮುಂದಿನ ವಾರ ಮಾಡುತ್ತೇವೆ ಎಂದು ಹೇಳುತ್ತಾ ಹೋದರೆ ವಿನಹ ಇವತ್ತಿನವರೆಗೂ ಆರಾಧನಾ ಸಮಿತಿ ಆಗಲಿಲ್ಲ ನಾನು ಶಾಸಕ ಅಧ್ಯಕ್ಷರು ಎಂದು ಪ್ರಚಾರ ಮಾಡಿದ್ದಾರೆ, ಅಲ್ಲಿ ಜನ ನನ್ನ ಹತ್ತಿರ ಕೇಳುತ್ತಿದ್ದಾರೆ ನಮಗೆ ಅನುದಾನ ಯಾವಾಗ ಕೊಡುತ್ತೀರಿ ಎಂದು ಸರ್ಕಾರ ಏನು ಉತ್ತರ ಕೊಡುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಆರಾಧನಾ ಸಮಿತಿಗೆ ಶಾಸಕರೇ ಅಧ್ಯಕ್ಷರು, ಸಮಿತಿ ಸದಸ್ಯರನ್ನು ನೇಮಕ ಮಾಡಿಲ್ಲ. ಆದ್ದರಿಂದ ಸಭೆ ಸೇರಿ ಹಣ ಕೊಡಲಿಕ್ಕಾಗಲಿಲ್ಲ ಅಂತ. ಇದು ವಿತಕ್ಕೋಸ್ಕರ ವಿಳಂಬ ಆಯಿತೋ ನನಗೆ ಗೊತ್ತಿಲ್ಲ. 15 ದಿವಸದಲ್ಲಿ ಆರಾಧನಾ ಸಮಿತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸಭಾಪತಿಗಳೇ, ನೀವೇ ಚೇರ್ಮನ್. ಸಮಿತಿ ಮಾಡಬೇಕಾಗುವುದು ಸರ್ಕಾರದ ಜವಾಬ್ದಾರಿ. ನೀವು ಕಮಿಟಿಯಿಂದ ಪಿಟಿಶನ್ಸ್ ತೆಗೆದುಕೊಳ್ಳಿ ಎಲ್ಲೆಲ್ಲಿ ಮಾಡಬೇಕೋ ಅಲ್ಲಿ ಮಾಡಿ ಕಳುಹಿಸಿ.

ಶ್ರೀ ಎಂ. ಸಿ. ನಾಣಯ್ಯ : ಇಲ್ಲ ಅಧ್ಯಕ್ಷರೇ, ಸಮಿತಿ ಸದಸ್ಯರಾಗಬೇಕು, ಚೇರ್ಮನ್ನೇ ಮಾಡುವುದಕ್ಕೆ ಆಗುವುದಿಲ್ಲ. ನಾಲ್ವರು ಸದಸ್ಯರಿರಬೇಕು. ಖಾಸಗಿ ಸದಸ್ಯರೂ ಇರುತ್ತಾರೆ 15 ದಿವಸದಲ್ಲಿ ಆ ಕೆಲಸ ಮಾಡುತ್ತೇವೆ.